ಎಂ ವಿ ಸಿ ನಂ. 163/2019
ಆರ್ ಡಬ್ಲ್ಯೂ: 2
ದಿನಾಂಕ 13/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ಎದುರುದಾರರ ಪರ: ಶ್ರೀ ಹೆಚ್ ಟಿ ಆರ್ ವಕೀಲರಿಂದ:

ಆರ್ ಟಿ ಒ ದವರು ನೀಡಿರುವ ಹಿಂಬರಹದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಆರ್-11 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:

ನಿಆರ್-**11** ರ ಹಿಂಬರಹವನ್ನು ದಿನಾಂಕ **06/10/2017** ರಂದು ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ಹಿಂಬಹರದಲ್ಲಿ ದಿನಾಂಕ **05/10/2018** ರಂದು ಆ ಹಿಂಬರಹದ ಅವಧಿ ಮುಕ್ತಾಯಗೊಳ್ಳುತ್ತದೆ ಎಂದು ಕಾಣಿಸಲಾಗಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನನ್ನ ವಾಹನಕ್ಕೆ ಅಪಘಾತದ ದಿನ ಎಫ್ ಸಿ ರಿನೀವಲ್ ಆಗಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ಎಫ್ ಸಿ ರಿನೀವಲ್ ಮಾಡಿಸಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ನಿಆರ್-**11** ರ ದಾಖಲೆ ಅದೇ ಎಂದು ನುಡಿಯುತ್ತಾರೆ. ನಿಆರ್-**11** ಎಪ್ ಸಿ ರಿನೀವಲ್ ಸರ್ಟಿಪಿಕೇಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಎಫ್ ಸಿ ರಿನೀವಲಾದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಆರ್-**11** ರ ದಾಖಲೆಯನ್ನು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಆರ್-**11** ರ ದಾಖಲೆಯಲ್ಲಿ ದಿನಾಂಕ **06/10/2017** ಎಂದು ದಿನಾಂಕ ಸೃಷ್ಟಿ ಮಾಡಿ

ಆರ್ ಟಿ ಒ ದಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಎಫ್ ಸಿ ಪಡೆದ ನಂತರ ನಾನು ನವೀಕೃತ ಆರ್ ಸಿ ಯನ್ನು ಪಡೆದಿರುತೆತೇನಾ ಎಂದರೆ ಸಾಕ್ಷಿ ಎಫ್ ಸಿ ರಿನೀವಲ್ ಗೆ ಸಂದಬಪಟ್ಟಂತೆ ನಿಆರ್-11 ರ ದಾಖಲೆ ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಆರ್-5 ರ ದಾಖಲೆ ನನ್ನ ವಾಹನಕ್ಕೆ ಸಂಬಂದಪಟ್ಟ ಆರ್ ಸಿ ದಾಖಲೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ನೊಂದಣಿಯ ಕಾಲಾವದಿ ದಿನಾಂಕ 18/10/2017 ಕ್ಕೆ ಅಂತ್ಯಗೊಳ್ಳುತ್ತದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಆದಾದ ನಂತರದಲ್ಲಿ ನಾನು ನನ್ನ ವಾಹನವನ್ನು ಆರ್ ಟಿ ಒ ಅಧಿಕಾರಗಳ ಮುಂದೆ ತಪಾಸಣೆಗೆ ಒಳಪಡಿಸಿ ಎಫ್ ಸಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ವಾಹನದ ಎಫ್ ಸಿ ಅವಧಿ ಮುಗಿದಿದ್ದು ಚಾಲನೆಗೆ ಯೋಗ್ಯವಲ್ಲದೆ ಇದ್ದರೂ ಸಹ ಅದನ್ನು ಚಾಲನೆ ಮಾಡಲು ನಾನು ಅವಕಾಶ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.